ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 5–8–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರಗಳ ಸದಸ್ಯರಿಗೆ ಶೈಕ್ಷಣಿಕ ತರಬೇತಿ ಕಾರ್ಯಾಗಾರ.<br><br>ಉದ್ಘಾಟನೆ:<br><br>ದಿನೇಶ್ ಗುಂಡೂರಾವ್,<br>ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. | 06–08–2015<br>ಗುರುವಾರ<br>ಬೆಳಗ್ಗೆ<br>10–00 ಗಂಟೆಗೆ | ಕೆ.ಎ.ಎಸ್. ಅಧಿಕಾರಿಗಳ ಸಭಾಂಗಣ,<br>ಇನ್‌ಫೆಂಟ್ರಿ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ದಿವಂಗತ ನಿಜಲಿಂಗಪ್ಪನವರ 15ನೇ ಪುಣ್ಯತಿಥಿ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪನವರ 15 ನೇ ಪುಣ್ಯತಿಥಿ ಅಂಗವಾಗಿ ಆಗಸ್ಟ್ 8 ರ ಶನಿವಾರದಂದು ಬೆಳಿಗ್ಗೆ 10–00 ಗಂಟೆಗೆ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡುವರು.

ಪಲ್ಲವಿ:ಬಾಬು:ಜಿಪಿಆರ್.

# ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಕ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ಗ್ರಾಮ ಸ್ವರಾಜ್ ಯೋಜನೆಯ ಅಪರ ಮುಖ್ಯಸ್ಥ ಡಾ. ಎಂ. ಆರ್. ಏಕಾಂತಪ್ಪ ಅವರನ್ನು ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಅವರು ಇತ್ತೀಚೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

# ಡಿಪಿ ಇಡಿ. ಪರೀಕ್ಷಾ ಫಲಿತಾಂಶ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾದ ಜೂನ್ 2015 ರ ಡಿ.ಪಿ.ಇಡಿ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳ ಫಲಿತಾಂಶವನ್ನು ಆಗಸ್ಟ್ 10 ರಂದು ಬೆಳಿಗ್ಗೆ 11.00 ಗಂಟೆಗೆ ಎಲ್ಲಾ ಡಿ.ಪಿ.ಇಡಿ ಕಾಲೇಜುಗಳಲ್ಲಿ ಪ್ರಕಟಿಸಲಾಗುವುದು.

ಮಂಡಳಿಯ ವೆಬ್‌ಸೈಟ್ www.kseeb.kar.nic.in ನಲ್ಲಿ ಫಲಿತಾಂಶವನ್ನು ದಿನಾಂಕ 07-08-2015 ರಂದು ಮಧ್ಯಾಹ್ನ 2.00 ಗಂಟೆಯ ನಂತರ ವೀಕ್ಷಿಸಬಹುದು. ಉತ್ತರ ಪತ್ರಿಕೆಯ ಛಾಯಾಪ್ರತಿ ಮತ್ತು ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ದಿನಾಂಕ 24-08-2015 ಕೊನೆಯ ದಿನಾಂಕವಾಗಿರುತ್ತದೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್.

# DP Ed. Examination Results

**Bangalore, Aug 5th (Information)**

**The result of June 2015 D.P.Ed Examination conducted by the Karnataka Secondary Education Examination Board, will be announced on 10-8-2015 at 11.00 AM. in all the D.P.Ed Colleges. The results will also be available in website address www.kseeb.kar.nic.in from 07-08-2015 pm onwards. Last date for submission of application for retotalling and xerox copy of answer booklets will be 24.08.2015.**

pallavi:babu:gpr

# ಕ.ಸ.ಪ.: ವಿವಿಧ ಪ್ರಶಸ್ತಿ ವಿಜೇತರ ಪಟ್ಟಿ ಪ್ರಕಟ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಕನ್ನಡ ಸಾಹಿತ್ಯ ಪರಿಷತ್ತು ನೀಡುವ ವಿವಿಧ ಪ್ರಶಸ್ತಿಗಳಲ್ಲಿ 2014 ನೇ ಸಾಲಿನ ಈ ಕೆಳಗಿನ ಕೃತಿಗಳು, ಕೃತಿಕಾರರು ಆಯ್ಕೆಯಾಗಿದ್ದಾರೆ.

ಸ್ವಸ್ತಿಶ್ರೀ ದೇವೇಂದ್ರ ಕೀರ್ತಿ ದತ್ತಿಯ: ರೂ. 6,000 ನಗದು ಪ್ರಶಸ್ತಿಗೆ ಡಾ: ಹೊ.ಶ್ರೀ ಮದನಕೇಸರಿ ಅವರು ಬರೆದಿರುವ 'ಜೈನಧರ್ಮಾಧ್ಯಯನ' ಭಾರತೀಸುತ ಸ್ಮಾರಕ ದತ್ತಿಯ ನಗದು ಪ್ರಶಸ್ತಿ ರೂ. 5.000-00 ರೂ.ಗಳು ವಿಶ್ವನಾಥ ಕಾರ್ನಾಡ ಅವರು ರಚಿಸಿರುವ 'ಹಿಂದಿರುಗಿ ಬಂದವನು' ಎಂಬ ಕೃತಿಗೆ ದೊರೆತಿದೆ. ಶ್ರೀಮತಿ ಲಕ್ಷ್ಮೀದೇವಿ ಶಾಂತರಸ ಹೆಂಬೇರಾಳು ದತ್ತಿಯ ನಗದು ಪ್ರಶಸ್ತಿ ರೂ. 5,000/- ಗಳು ಸುದಾ ಚಿದಾನಂದ ಗೌಡ ಅವರ 'ಬಯಲ ಧ್ಯಾನ' ಕೃತಿಗೆ ದೊರೆತಿದೆ. ಕನ್ನಡ ಸಾಹಿತ್ಯ ಪರಿಷತ್ತು ಬೀಳಗಿ ಘಟಕ ದತ್ತಿಯ ನಗದು ಪ್ರಶಸ್ತಿ ತಲಾ ರೂ. 2,000 ಯನ್ನು ತಿರುಪತಿ ಭಾಗ ಅವರ ಕಥಾ ಸಂಕಲನ 'ಜಾತಿ ಕುಲುಮ್ಯಾಗ ಅರಳಿದ ಪ್ರೀತಿ' ಶಿವಾನಂದ ಪೂಜಾರಿ ಅವರ ನೆನೆಯಿಟ್ಟ ನೆನಪು, ಸಿದ್ದು ದಿವಾಣ ಅವರ ಜಾನಪದ ಕೃತಿ 'ಹಂತಿ ನೀ ಎಲ್ಲೋಗಿ ಕುಂತಿ' ಗೆ ದೊರೆತಿದೆ.

ಅಮೃತ ಮಹೋತ್ಸವ ಸವಿ ನೆನಪಿನ ದತ್ತಿಯ ನಗದು ಪ್ರಶಸ್ತಿ: ರೂ. 5,000 ಗೆ ಚೇತನ ಸೋಲಗಿಯವರ 'ಸಾಫ್ಟ್ ಜಗತ್ತಿನಲ್ಲಿ' ಕೃತಿಗೆ ದೊರೆತಿದೆ. ನಿಡುಸಾಲೆ ಪುಟ್ಟಸ್ವಾಮಯ್ಯ ಸಾಹಿತ್ಯ ದತ್ತಿಯ ನಗದು ಪ್ರಶಸ್ತಿ: ರೂ. 5,000 ಗೆ ವಸಂತ ಕುಷ್ಟಗಿಯವರ 'ಹೈದರಾಬಾದ್ ಕರ್ನಾಟಕ ಕಣಜದಿಂದ' ಕೃತಿಗೆ ಶ್ರೀಮತಿ ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ದತ್ತಿಯ ನಗದು ಪ್ರಶಸ್ತಿ 10,000/-ಗೆ ಪ್ರೊ. ಜಿ. ಅಬ್ದುಲ್ ಬಷೀರ್ ಅವರ 'ವಚನ ವಾಙ್ಮಯ ವಿಹಾರ' ಕ್ಕೆ ಹಾಗೂ ಗುಬ್ಬಿ ಸೊಲೂರು ಮರುಗಾರಾಧ್ಯ ದತ್ತಿಯ ನಗದು ಪ್ರಶಸ್ತಿ ರೂ. 5,000/- ಗೆ ಪ್ರೇಮ ತಪಸ್ವಿನಿ ಚಿತ್ರಾಂಗದೆಗೆ ಶ್ರೀಮತಿ ಎಸ್.ಪಿ. ವಿಜಯಲಕ್ಷ್ಮಿ ಅವರ ಕೃತಿಗೆ ದೊರೆತಿದೆ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಪಲ್ಲವಿ/ಕೆಎಂ

## Exam dates for the post of District Judges announced

**Bangalore, August 5 (Karnataka Informaiton):**

**The High Court of Karnataka will conduct Competitive Written Examination for recruitment of District Judges by Direct Recruitment on 30th August, 2015 at Bengaluru.**

The timings for two papers ie., Civil Law will be from 10.00 a.m. to 1.00 p.m. and Criminal Law will be from 2-30 p.m. to 5.30 p.m. The Admission Cards to the eligible candidates will be uploaded shortly, said Registrar General, John Michael Cunha.
pallavi/km

## ಆಗಸ್ಟ್ 7 ರಂದು ಟಿ. ಎಸ್. ನಾಗಾಭರಣ: ಬೆಳ್ಳಿ ಹೆಜ್ಜೆ:

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೈಸೂರು ಜಿಲ್ಲಾ ಕಛೇರಿಯ ಸಹಯೋಗದಲ್ಲಿ ಆಗಸ್ಟ್ 7 ರಂದು ಸಂಜೆ 4–00 ಗಂಟೆಗೆ ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬೆಳ್ಳಿ ಹೆಜ್ಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸ ಪ್ರಸಾದ್, ಲೋಕೋಪಯೋಗಿ ಸಚಿವ ಡಾ: ಹೆಚ್.ಸಿ. ಮಹದೇವಪ್ಪ, ಸಹಕಾರ ಮತ್ತು ಸಕ್ಕರೆ ಸಚಿವ ಶ್ರೀ ಹೆಚ್.ಎಸ್. ಮಹದೇವಪ್ರಸಾದ್ ಮುಂತಾದ ಗಣ್ಯರು ಪಾಲ್ಗೊಳ್ಳುತ್ತಿದ್ದು ಅಕಾಡೆಮಿ ಅಧ್ಯಕ್ಷರಾದ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಬೆಳ್ಳಿ ಹೆಜ್ಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಚಲನಚಿತ್ರ ಅಕಾಡೆಮಿಗೀಗ 6 ವರ್ಷದ ಹರೆಯ. ಇಷ್ಟು ಚಿಕ್ಕ ಅವಧಿಯಲ್ಲಿ ಅಕಾಡೆಮಿ ಮೂಡಿಸಿದ ದಿಟ್ಟ ಹೆಜ್ಜೆಗಳು ಅಗಣಿತ . ಅಕಾಡೆಮಿಯ ಅತಿ ಜನಪ್ರಿಯ ಕಾರ್ಯಕ್ರಮ "ಬೆಳ್ಳಿ ಹೆಜ್ಜೆ" ಚಿತ್ರೋದ್ಯಮ ಹಿರಿಯರ, ಸಾಧಕರ, ನಟರ, ಗಾಯಕರ ಮಧುರ ನೆನಪುಗಳ ಮೆರವಣಿಗೆಯೇ "ಬೆಳ್ಳಿ ಹೆಜ್ಜೆ" ಯ ಹೂರಣ.

ಇದು ಒಂದು ರೀತಿ ಕನ್ನಡ ಚಿತ್ರರಂಗದ ಅನೌಪಚಾರಿಕ ಇತಿಹಾಸ ಸೃಷ್ಟಿಯ ಕೆಲಸ. ಇದುವರೆಗೆ 50 ಕ್ಕೂ ಹೆಚ್ಚು "ಬೆಳ್ಳಿ ಹೆಜ್ಜೆ" ಮೂಡಿ ಬಂದಿವೆ. ಕನ್ನಡ ಚಿತ್ರ ಸಾಗರದಿಂದ ನೂರಾರು ಅಮೂಲ್ಯ ರತ್ನಗಳು ಹರಳುಗಟ್ಟಿಕೊಂಡಿವೆ. ಇವುಗಳ ದಾಖಲೆ ಚಿತ್ರರಂಗದ ಇತಿಹಾಸಕ್ಕೆ ಹೊಸ ಆಯಾಮ ಕಟ್ಟಿಕೊಟ್ಟಿದೆ.

ಬೆಂಗಳೂರಿನಲ್ಲಿ ಮೂಡಿದ ಬೆಳ್ಳಿ ಹೆಜ್ಜೆಗಳ ಗುರುತು ನಾಡಿದ ಬೇರೆಡೆಯೂ ಕಾಣುವಂತಾಗಬೇಕು. ಸಾಧಕರ ತವರಿನಲ್ಲಿ ಮೂಡಿ ಬರುವ ಬೆಳ್ಳಿ ಹೆಜ್ಜೆಗೆ ಸ್ಥಳೀಯ ಸೊಬಗು ತುಂಬಬೇಕೆಂಬುದು ಚಲನಚಿತ್ರ ಅಕಾಡೆಮಿಯ ಹೆಬ್ಬಯಕೆ. ಹಾಗಾಗಿಯೇ ಈ ಬಾರಿಯ ಬೆಳ್ಳಿ ಹೆಜ್ಜೆ ಮೂಡಲಿರುವುದು ಮೈಸೂರಿನಲ್ಲಿ. ಮೈಸೂರಿನ ಹೆಮ್ಮೆಯ ಕೊಡುಗೆ ನಾಗಾಭರಣ ಅವರ ಅನುಭವಗಳ ಧಾರೆಯಲ್ಲಿ – ಎಂದು ಶ್ರೀ ದಿನೇಶ್ ವಿವರಿಸಿದ್ದಾರೆ.

ಬೆಳ್ಳಿ ಹೆಜ್ಜೆ ರೂವಾರಿ ರಾಜ್ಯ ಚಲನಚಿತ್ರ ಅಕಾಡೆಮಿ ಪ್ರಥಮ ಅಧ್ಯಕ್ಷ ಶ್ರೀ ಟಿ.ಎಸ್. ನಾಗಾಭರಣ ಅಧಮ್ಯ ಕನಸುಗಾರನ ಕನಸುಗಳಿಗೆ ರೆಕ್ಕೆ ಮೂಡಿದ್ದು ಇಂತಹ ಪ್ರಯತ್ನಗಳಿಂದ ಅವರೊಬ್ಬ ಧೀಮಂತ ಚಿತ್ರೋದ್ಯಮಿ, ರಂಗಕರ್ಮಿ, ಸೃಜನಶೀಲ, ಆಡಳಿತಗಾರ ಎಲ್ಲವೂ ಆಗಿದ್ದಾರೆ. ಈ ಬೆಳ್ಳಿ ಹೆಜ್ಜೆ ಮೈಸೂರಿನವರದಾ ನಾಗಾಭರಣ ಅವರ ಸುಂದರ ನೆನಪುಗಳ ಸರಮಾಲೆಯಾಗಲಿದೆ.
ಪಲ್ಲವಿ/ಬಾಬು/ಕೆಎಂ

**ಆತ್ಮಹತ್ಯೆ ಹಾಗೂ ಬೆಳೆ ಹಾನಿ ಕುರಿತಂತೆ ಸಧ್ಯದಲ್ಲೇ ದೆಹಲಿಗೆ**
**ಸರ್ವ ಪಕ್ಷಗಳ ನಿಯೋಗ, ಪ್ರಧಾನಿ ಭೇಟಿ : ಸಿದ್ದರಾಮಯ್ಯ**

**ಹುಬ್ಬಳ್ಳಿ, ಆಗಸ್ಟ್ 5 ( ಕರ್ನಾಟಕ ವಾರ್ತೆ ) :**

ರಾಜ್ಯದಲ್ಲಿ ಸಂಭವಿಸಿರುವ ರೈತರ ಆತ್ಮಹತ್ಯೆ ಪ್ರಕರಣಗಳು ಹಾಗೂ ಅಕಾಲಿಕ ಮಳೆಯಿಂದ ಉಂಟಾಗಿರುವ ಬೆಳೆ ಹಾನಿ ಮತ್ತು ಕೆಲವೆಡೆ ಮಳೆಯೇ ಇಲ್ಲದೆ ಬರದಿಂದ ಉದ್ಭವಿಸಿರುವ ಪರಿಸ್ಥಿತಿ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಕೊಟ್ಟು ಹೆಚ್ಚಿನ ಪರಿಹಾರ ಒದಗಿಸುವಂತೆ ಪ್ರಧಾನ ಮಂತ್ರಿಯವರಿಗೆ ಮನವಿ ಸಲ್ಲಿಸಲು ರಾಜ್ಯದ ಸರ್ವ ಪಕ್ಷಗಳ ನಿಯೋಗವು ಸಧ್ಯದಲ್ಲೇ ನವ ದೆಹಲಿಗೆ ತೆರಳಲಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಪ್ರಕಟಿಸಿದರು.

ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿರುವ ರೈತರ ಮನೆಗಳಿಗೆ ಭೇಟಿ ನೀಡಿ, ಮೃತ ರೈತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಲು ಆಗಮಿಸಿದ ಶ್ರೀ ಸಿದ್ದರಾಮಯ್ಯ ಅವರು ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಈ ವಿಷಯವನ್ನು ಬಹಿರಂಗಪಡಿಸಿದರು.

ಪ್ರಧಾನಿ ಕಾರ್ಯಾಲಯವನ್ನು ಈಗಾಗಲೇ ಸಂಪರ್ಕಿಸಿ ಸಂಸತ್ ಅಧಿವೇಶನ ಮುಗಿಯುವ ಮುನ್ನವೇ ಭೇಟಿಗೆ ಸಮಯ ನಿಗದಿಪಡಿಸುವಂತೆ ಕೋರಿಕೆ ಸಲ್ಲಿಸಲಾಗಿದೆ ಎಂದು ತಿಳಿಸಿದ ಶ್ರೀ ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಕಳಸಾ ಬಂಡೂರಿ ನಾಲಾ ಯೋಜನೆಯ ಕುರಿತೂ ಪ್ರಸ್ತಾಪಿಸಿ ಪ್ರಧಾನಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಬೆಟ್ಟಿಂಗ್ ಹಗರಣ

ಬೆಟ್ಟಿಂಗ್ ಹಗರಣದ ತನಿಖೆ ಪ್ರಗತಿಯಲ್ಲಿದೆ. ಹಗರಣದಲ್ಲಿ ಯಾರೇ ಭಾಗಿಯಾಗಿದ್ದರೂ, ಅವರ ವಿರುದ್ಧ ನಿರ್ಧಾಕ್ಷಿಣ್ಯ ಕ್ರಮ ಜರುಗಿಸಲಾಗುವುದು. ಇಂತಹ ಕುಕೃತ್ಯಗಳಲ್ಲಿ ತೊಡಗಿರುವ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಪತ್ರಕರ್ತರೋರ್ವರ ಪ್ರಶ್ನೆಗೆ ಮುಖ್ಯಮಂತ್ರಿ ಉತ್ತರಿಸಿದರು.

*********

ಡಿ ಪಿ ಎಂ